# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 852(1074) |
| 2) ಸದಸ್ಯರ ಹೆಸರು | : | ಶ್ರೀ ಎಂ.ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) ಉತ್ತರಿಸುವ ದಿನಾಂಕ | : | 19.12.2018. |
| 4) ಉತ್ತರಿಸುವವರು | : | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಕಲೇಶಪುರ ವಲಯದಲ್ಲಿ ಎತ್ತಿನಹೊಳೆ ವ್ಯಾಪ್ತಿಯಲ್ಲಿ ಬಿದಿರು ಮತ್ತು ಬೆತ್ತ ನೆಡುವ ಯೋಜನೆಯಡಿ ಕಳೆದ 2 ವರ್ಷಗಳಲ್ಲಿ ಎಷ್ಟು ಗಿಡಗಳನ್ನು ನೆಡಲಾಗಿದೆ; ಈ ಯೋಜನೆಗೆ ಬಿಡುಗಡೆಯಾದ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು; (ವಿವರ ನೀಡುವುದು) | ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ವ್ಯಾಪ್ತಿಯ ಪ್ರದೇಶಗಳಲ್ಲಿ ಬಿದಿರು ಮತ್ತು ಬೆತ್ತ ನೆಡುವ ಯೋಜನೆಗಳಿಗೆ ಯಾವುದೆ ಹಣ ಬಿಡುಗಡೆಯಾಗಿರುವುದಿಲ್ಲ. ಆದರೆ ಸದರಿ ಯೋಜನಾ ವ್ಯಾಪ್ತಿಯಲ್ಲಿ ಕಡಿತಲೆ ಮಾಡಲಾದ ಮರಗಳ ಪರ್ಯಾಯವಾಗಿ 2017-18ನೇ ಸಾಲಿನಲ್ಲಿ ವಿವಿಧ ಜಾತಿಯ ಸ್ಥಳೀಯ ಗಿಡಗಳನ್ನು ಒಳಗೊಂಡ 519.00 ಹೆಕ್ಟೇರು ಪ್ರದೇಶದಲ್ಲಿ ನೆಡುತೋಪು ಬೆಳಸಲಾಗಿದೆ. ಸದರಿ ನೆಡುತೋಪು ಬೆಳೆಸುವ ಕಾರ್ಯಕ್ಕೆ ರೂ.199.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಸದರಿ ಮೊತ್ತವನ್ನು ಪೂರ್ಣವಾಗಿ ವೆಚ್ಚ ಮಾಡಲಾಗಿದೆ.<br><br>2018-19ನೇ ಸಾಲಿಗೆ ಪ್ರಸ್ತಾಪಿತ 519.00 ಹೆಕ್ಟೇರು ನೆಡುತೋಪು ಮೊದಲನೇ ವರ್ಷದ ನಿರ್ವಹಣೆ ಮಾಡಲು ರೂ.67.31 ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, ಇದುವರೆವಿಗೂ ರೂ.27.80 ಲಕ್ಷ ವೆಚ್ಚ ಮಾಡಲಾಗಿದೆ. |
| ಆ) | ಸಕಲೇಶಪುರ ತಾಲ್ಲೂಕು ಹಾನುಭಾಳು ಹೋಬಳಿ ದೇವಾಲಯದ ಕೆರೆ ಪಂಚಾಯಿತಿಯ ಕೊಡಚಹಳ್ಳಿ ಗ್ರಾಮದಲ್ಲಿ ಹುಲಿಬನ ರೆಸಾರ್ಟ್ ಹೆಸರಿನಲ್ಲಿ ರೆಸಾರ್ಟ್ ನಡೆಯುತ್ತಿದೆಯೇ; ಅದು ಸರ್ಕಾರಿ ಜಮೀನು ಮತ್ತು ಕಾಯ್ದಿರಿಸಿದ ಅರಣ್ಯ ಮತ್ತು ಜಪಾವತಿ ನದಿಯ ಮೂಲದಲ್ಲಿ ಒತ್ತುವರಿ ಮಾಡಿದೆಯೇ; ಒತ್ತುವರಿಯಾಗಿದ್ದಲ್ಲಿ ಅರಣ್ಯ ಇಲಾಖೆ ಇದನ್ನು ಪರಿಶೀಲಿಸಿದೆಯೇ; ಪರಿಶೀಲಿಸಿದ್ದಲ್ಲಿ ಏನು ಕ್ರಮಕೈಗೊಳ್ಳಲಾಗಿದೆ; (ವಿವರ ನೀಡುವುದು) | ಹೌದು.<br><br>ಸಕಲೇಶಪುರ ತಾಲ್ಲೂಕು ಹಾನುಬಾಳು ಹೋಬಳಿ ದೇವಾಲದ ಕೆರೆ ಪಂಚಾಯಿತಿಯ ಕೊಡಚಳ್ಳಿ ಗ್ರಾಮದ ಸರ್ವೆ ನಂ:23ರ ಖಾಸಗಿ ಜಮೀನಿನಲ್ಲಿ ಹುಲಿಬನ ರೆಸಾರ್ಟ್ ನಡೆಯುತ್ತಿದೆ.<br><br>ದಿನಾಂಕ 09.06.2017ರಂದು ಸ್ಥಳೀಯ ಅರಣ್ಯ ಅಧಿಕಾರಿಗಳು ಹಾಗೂ ತಹಸಿಲ್ದಾರ್, ಸಕಲೇಶಪುರ ರವರು ನಡೆಸಿದ ಜಂಟಿ ಪರಿಶೀಲನೆಯಂತೆ ಸರ್ಕಾರಿ ಜಮೀನು, ಕಾಯ್ದಿರಿಸಿದ ಅರಣ್ಯ ಮತ್ತು ಜಪಾವತಿ ನದಿಯ ಮೂಲದಲ್ಲಿ ಒತ್ತುವರಿ ಮಾಡಲಾಗಿರುವುದಿಲ್ಲ. |

| | | |
|---|---|---|
| ಇ) | ಈ ರೆಸಾರ್ಟ್‌ನವರು ಕಾಯ್ದಿರಿಸಿದ ಅರಣ್ಯದೊಳಗೆ ರಸ್ತೆಗಳನ್ನು ನಿರ್ಮಾಣ ಮಾಡಿರುವುದಾಗಿ ಮತ್ತು ಈ ಭಾಗದಲ್ಲಿ ಪ್ರಾಣಿ ಬೇಟೆಗಾಗಿ ಪ್ರೋತ್ಸಾಹ ನೀಡುತ್ತಿರುವ ಬಗ್ಗೆ ದೂರುಗಳು ಬಂದಿವೆಯೇ; ದೂರುಗಳು ಬಂದಿದ್ದಲ್ಲಿ, ಏನು ಕ್ರಮಕೈಗೊಳ್ಳಲಾಗಿದೆ? (ವಿವರ ನೀಡುವುದು) | ವಲಯ ಅರಣ್ಯ ಅಧಿಕಾರಿ, ಸಕಲೇಶಪುರ ರವರ ದಿನಾಂಕ: 15.06.2017 ರ ವರದಿಯಂತೆ ಕೊಡಚಳ್ಳಿ ಸರ್ವೆ ನಂ. 23 ರ ಹಿಡುವಳಿ ಪ್ರದೇಶಕ್ಕೆ ತಲುಪಲು, ಸರ್ಕಾರಿ ಸರ್ವೆ ನಂ. 21 ರಲ್ಲಿ (ಡೀಮ್ಡ್ ಅರಣ್ಯ) 1 ಕಿಮೀ ರಸ್ತೆಯಿದ್ದು, ಸದರಿ ರಸ್ತೆಯು ಈ ಹಿಂದೆ ಕೂಪ್ ರಸ್ತೆಯಾಗಿರುತ್ತದೆ ಎಂದು ಮತ್ತು ಪ್ರಾಸ್ತಪಿತ ರಸ್ತೆಯನ್ನು ಅಗಲೀಕರಿಸಿರುವುದಾಗಲೀ, ನವೀಕರಿಸಿರುವುದಾಗಲೀ ಕಂಡು ಬಂದಿರುವುದಿಲ್ಲವೆಂದು ಮತ್ತು ಸರ್ಕಾರಿ ಸರ್ವೆ ನಂ. 21 (ಡೀಮ್ಡ್ ಅರಣ್ಯ) & 29 ರ ಮಧ್ಯದಲ್ಲಿರುವ ಹಲವು ಹಿಡುವಳಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಹಾಗೂ ಗ್ರಾಮಗಳ ಜಾನುವಾರುಗಳು ಓಡಾಡುವ ಮೂರ್ನಾಲ್ಕು ರಸ್ತೆಗಳು ಕೊಡಚಳ್ಳಿ ಗ್ರಾಮದ ಸರ್ವೆ ನಂ. 23ಕ್ಕೆ ಹೋಗುವ ರಸ್ತೆಗೆ ಹೊಂದಿಕೊಂಡಿರುವುದಾಗಿ ತಿಳಿಸಿರುತ್ತಾರೆ.<br><br>ಶ್ರೀ ಹೆಚ್.ಎಂ. ವಿಶ್ವನಾಥ್ ಮಾಜಿ ಶಾಸಕರು ಆಲೂರು, ಸಕಲೇಶಪುರ, ವಿಧಾನ ಸಭಾ ಕ್ಷೇತ್ರ ಇವರು ಘನವೆತ್ತ ರಾಜ್ಯಪಾಲರು, ಕರ್ನಾಟಕ ರಾಜ್ಯ ರವರಿಗೆ ದಿನಾಂಕ 06.10.2016 ರಂದು ಸಲ್ಲಿಸಿದ ದೂರರ್ಜಿಯಲ್ಲಿನ ಅಂಶಗಳ ಬಗ್ಗೆ ಪರಿಶೀಲನೆ ನಡೆಸಿದ ಸ್ಥಳೀಯ ಅರಣ್ಯ ಅಧಿಕಾರಿಗಳು ಹುಲಿಬನ ರೆಸಾರ್ಟ್‌ನವರು ವನ್ಯಪ್ರಾಣಿಗಳನ್ನು ಬೇಟೆಯಾಡುತ್ತಿರುವ ಬಗ್ಗೆ ಯಾವುದೇ ಸಾಕ್ಷ್ಯಾದಾರಗಳು ಲಭ್ಯವಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ. |

ಸಂಖ್ಯೆ: ಅಪಜೀ 75 ಎಫ್‌ಟಿಎಸ್ 2018

**(ಆರ್. ಶಂಕರ್)**
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು